ಓ. ಎಸ್ . 293/2021 ಪಿ.ಡಬ್ಲ್ಯೂ - 1 ಇಬ್ರಾಹಿಂಸಾಬ ನದಾಫ

**(ದಿನಾಂಕಃ 24-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಮುಂದುವರೆದ ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎ ಎಂ ವಿ ವಕೀಲರಿಂದ -**

**9.** ಸಬ್ ರಜಿಸ್ಟ್ರಾರ ಹುಕ್ಕೇರಿಗೆ ದಿನಾಂಕ **22-02-2021** ರಂದು ಬಂದಾಗ ನನ್ನ ಮಗ ನನ್ನ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದ , ನಾನು ಯಾವ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದೆ ಎಂದು ನನಗೆ ನೆನಪಿಲ್ಲ. ನನ್ನ ಮಗ ಇಂಗ್ಲೀಷಿನಲ್ಲಿ ಆ ದಾಖಲೆಗಳನ್ನು ಬರೆಸಿದ್ದ. ನನಗೆ ಇಂಗ್ಲೀಷ ತಿಳಿದುಕೊಳ್ಳಲು ಓದಲು ಬರುತ್ತದೆ ಎಂದರೆ ಅಷ್ಟೊಂದು ಬರುವುದಿಲ್ಲ ಎಂದು ಹೇಳುತ್ತಾರೆ. ನಾನು ಹೋದ ಬಾರಿ ಬಂದಾಗ ವಕೀಲರ ಜೊತೆಗೆ ಮತ್ತು ಕೋರ್ಟಿನ ಜೊತೆಗೆ ಇಂಗ್ಲೀಷನಲ್ಲಿ ಸಂವಾದ ಮಾಡಿದ್ದೆ ಎಂದರೆ ಸರಿಯಲ್ಲ. ನಾನು **1981** ರಲ್ಲಿ ನೌಕರಿ ಮಾಡುತ್ತ ಬಿ ಎ ಕಲಿತಿರುತ್ತೇನೆ. ನಾನು ಶಾಲೆಯಲ್ಲಿ ಇಂಗ್ಲೀಷ ಪಾಠ ಮಾಡಿದ್ದೇನೆ ಎಂದರೆ ಸ್ವಲ್ಪ ಸ್ವಲಪ ಮಾಡಿದ್ದೇನೆ , ನನ್ನದು ಇಂಗ್ಲೀಷ ಮೇಜರ ಅಲ್ಲ , ನಾನು ಉರ್ದು ಶಾಲೆಯಲ್ಲಿ ಮಾಸ್ತರ ಆಗಿ ಕೆಲಸ ಮಾಡಿದ್ದೇನೆ . ಉರ್ದು ಶಾಲೆಯಲ್ಲಿ ಎಲ್ಲ ವಿಷಯಗಳನ್ನು ಉರ್ದು ಭಾಷೆಯಲ್ಲಿ ಬೋಧನೆ ಮಾಡುತ್ತಾರೆ. ನಾನು ಇಂಗ್ಲೀಷ ಬೋದನೆ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ ಭಾಷೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ.

**10.** ನಾನು ಸಬ್ ರಜಿಸ್ಟ್ರಾರ ಕವಚೇರಿಯಲ್ಲಿ **3** ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ನನ್ನ ಮಗ ಹೇಳಿದ್ದ ಕಡೆಗೆ ಸಹಿ ಮಾಡಿದ್ದೇನೆ ಎಂದು ಹೇಳತ್ತಾರೆ . ಆ ದಿನ **2** ಗಿಫ್ಟ ಡೀಡ ಮತ್ತು ಒಂದು ವಿಲ್ ಆಗಿದೆ ಎಂದರೆ ಸಾಕ್ಷಿ ವಿಲ್ ಆಗಿದ್ದನ್ನು ಮಾತ್ರ ನನಗೆ ತೋರಿಸಿದ್ದಾರೆ , ಗಿಫ್ಟ ಡೀಡನ್ನು ನನಗೆ ತೋರಿಸಿಲ್ಲ ಎಂದು ಹೇಳುತ್ತಾರೆ. ನನ್ನ ಮಗನನ್ನು ಕರೆದುಕೊಂಡು ಬಂದು ಆ ದಿನ ನಾನೇ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ಗಿಫ್ಟ ಡೀಡಗಳನ್ನು ನಾನೇ ಬರೆಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಸಾಕ್ಷಿದಾರರನ್ನೂ ಸಹ ನಾನೇ ಕರೆದುಕೊಂಡು ಬಂದು ಗಿಫ್ಟ ಡೀಡಗಳನ್ನು ನಾನೇ ಮಾಹಿತಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. **2** ಗಿಫ್ಟ ಡೀಡಗಳಲ್ಲಿ ನನ್ನ ಮಗನ ಹೆಸರು ದಾಖಲ ಆಗಿದೆ ಎಂದರೆ ನನ್ನ ಮಗನೇ ಮಾಡಿಕೊಂಡಿದ್ದಾನೆ ಎಂದು ಹೇಳುತ್ತಾರೆ. ಮ್ಯೂಟೇಶನ ಆಗುವ ಸಮಯದಲ್ಲಿ ಏನಾದರೂ ತಕರಾರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಟಿ ಎಂ ಸಿ ಗೆ ನಾನು ತಕರಾರು ಕೊಟ್ಟಿದ್ದೆ ಎಂದು ಹೇಳುತ್ತಾರೆ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಿಲ್ಲ. ಪಂಚಾಯತಿಗೆ / ಟಿಪಿ ಎಂ ಸಿ ಯಲ್ಲಿ ಇದು ವಿಚಾರಣಾ ಪ್ರಕರಣ ಎಂದು ದಾಖಲ ಮಾಡಿಲ್ಲ , ಆದರೆ ಮ್ಯೂಟೇಶನ ಆಗುವುದನ್ನು ತಡೆ ಹಿಡಿದಿರುತ್ತಾರೆ. ಆ ಗಿಫ್ಟ ಡೀಡ ಪ್ರಕಾರ ಈಗಲೂ ಸಹ ನನ್ನ ಮಗನ ಹೆಸರಿಗೆ ಮ್ಯೂಟೇಶನ ಹಾಗೂ ಪಂಚಾಯತಿಯ ಉತಾರ ಹೋಗುತ್ತಿದೆ ಎಂದರೆ ಸರಿಯಲ್ಲ.

**11.** ಗಿಫ್ಟ ಡೀಡ ಪ್ರಕಾರ ನನ್ನ ಮಗನ ಹೆಸರು ಯಾವಾಗ ದಾಖಲ ಆಯಿತು ಎಂದು ನನಗೆ ಇದುವರೆಗೂ ಗೊತ್ತಿಲ್ಲ. ಈ ಕೇಸ ಏಕೆ ಮಾಡಿದ್ದೀರಿ ಎಂದರೆ ಈಗ

ತೆಗೆದುಕೊಂಡಿರುವ ಎಲ್ಲಾ ಆಸ್ತಿಗಳನ್ನು ಮರಳಿ ಕೊಡಬೇಕು ಎಂದು ಈ ದಾವೆ ಮಾಡಿದ್ದೇನೆ. ನನ್ನ ಮಗ ಮೋಸ ಮಾಡಿ ದಾಖಲೆಗಳನ್ನು ಬರೆಸಿಕೊಂಡಿದ್ದಾನೆ ಎಂದು ನಾನು ಇದುವರೆಗೂ ಪೋಲಿಸ ಕಂಪ್ಲೆಂಟ ಮಾಡಿಲ್ಲ ಹಾಗೂ ಪ್ರೈವೇಟ ಕಂಪ್ಲೆಂಟ ಸಹ ಕೋರ್ಟಿನಲ್ಲಿ ಮಾಡಿಲ್ಲ ಎಂದರೆ ನಿಜ. ನಾನೆ ಸ್ವಇಚ್ಛೆಯಿಂದ ಈ ಆಸ್ತಿಗಳಿಗೆ ಸಂಬಂಧ ಪಟ್ಟಂತೆ ಮಗನಿಗೆ ಗೀಪ್ಟ ಡೀಡ ಮಾಡಿದ್ದರಿಂದ ನಾನು ಪೋಲಿಸ ಕಂಪ್ಲೆಂಟ ಮಾಡಿಲ್ಲ ಎಂದರೆ ಸಾಕ್ಷಿ ನಾನು ಪೋಲಿಸ ಕಂಪ್ಲೆಂಟ ಮಾಡಲು ಹೋಗಿದ್ದೆ , ಆದರೆ ಪೋಲಿಸರು ಕೋರ್ಟಿನಲ್ಲಿ ಇರುವುದರಿಂದ ಕೇಸ ಮಾಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಪೋಲಿಸರು ಆ ರೀತಿ ಹಿಂಬರಹ ಕೊಟ್ಟಿಲ್ಲ , ಬಾಯಿ ಮಾತಿನಿಂದ ಹೇಳಿರುತ್ತಾರೆ. ಆ ಗೀಫ್ಟ ಡೀಡಗಳನ್ನು ಪ್ರಶ್ನೆ ಮಾಡಿ ನಾನು ಎಡಿ ಎಲ್ ಆರ್ ಕಡೆಗೆ ಹಾಗೂ ಅಸಿಸ್ಟಂಟ ಕಮಿಷನರ ಇವರ ಕಡೆಗೆ ಪ್ರಶ್ನೆ ಮಾಡಿಲ್ಲ ಎಂದರೆ ನಿಜ.

**12.** ವಿನಯಕುಮಾರ ಭೀಮಯ್ಯ ಹಾಗೂ ರಸೂಲಸಾಬ ಜಮಾದಾರ ಇವರು ನನಗೆ ಪರಿಚಯ ಇದ್ದಾರೆ ಎಂದರೆ ಸಾಕ್ಷಿ ವಿನಯಕುಮಾರ ಭೀಮಯ್ಯ ನನ್ನ ಮಗನ ಸ್ನೇಹಿತ ಹಾಗೂ ಬಿಲ್ಡರ ಇದ್ದು ರಸೂಲಸಾಬ ಜಮಾದಾರ ನನ್ನ ಮೊದಲನೆ ಹೆಂಡತಿ ತಮ್ಮ ಇರುತ್ತಾರೆ. ಇವರಿಬ್ಬರನ್ನೂ ಆ ದಿನ ನಾನು ನನ್ನ ಮಗನಿಗೆ ಗಿಫ್ಟ ಕೊಡುವವನಿದ್ದೇನೆ ಎಂದು ಹೇಳಿ ಅವರನ್ನು ಕರೆದುಕೊಂಡು ಬಂದಿದ್ದೆ ಎಂದರೆ ಸರಿಯಲ್ಲ. ದಿನಾಂಕ **22-02-2021** ರಂದು ನಾನು ಆಸ್ತಿಗಳನ್ನು ನನ್ನ ಮಗನಿಗೆ ಸಾಕ್ಷಿದಾರರ ಸಮಕ್ಷಮ ಕಬ್ಜಾ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಗಿಫ್ಟ ಡೀಡ ಪ್ರಕಾರ ಆ ಆಸ್ತಿಗೆ ನನ್ನ ಮಗನೆ ಮಾಲಿಕ ಮತ್ತು ಕಬ್ಜಾದಾರ ಇದು ಸರಕಾರಿ ಪಾಳೆಯ ತುಂಬುತ್ತ ಬಂದಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ನಾನೇ ತುಂಬುತ್ತ ಬಂದಿದ್ದೇನೇ ಎಂದು ಹೇಳುತ್ತಾರೆ . ನಾನು ಸರಕಾರಿ ಪಾಳೆಯ ತುಂಬಿದ ರಿಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರ ಮಾಡಿಲ್ಲ ಎಂದರೆ ಅದು ಬಾಡಿಗೆದಾರರ ಹತ್ತಿರ ಇರುತ್ತದೆ ಎಂದು ಹೇಳುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರ ಮಾಡಲು ನನಗೆ ತೊಂದರೆ ಇಲ್ಲ. ದಿನಾಂಕ **22-02-2021** ರ ನಂತರ ನಾನು ಸದರಿ ಆಸ್ತಿಗೆ ಮಾಲಿಕನೂ ಇಲ್ಲ ಮತ್ತು ಕಬ್ಜಾದಾರನು ಇಲ್ಲ ಎಂದರೆ ಸರಿಯಲ್ಲ. ಗಿಫ್ಟ ಡೀಡ ಮಾಡಿದ ದಿನವೇ ನನಗೆ ಆ ಆಸ್ತಿಗಳ ಮೇಲೆ ಹಕ್ಕು ನಷ್ಟ ಆಗಿದೆ ಎಂದರೆ ಸರಿಯಲ್ಲ.

**13.** ಈ ದಾವೆ ಮಾಡುವ ಸಮಯದಲ್ಲಿ ನಾನು ಯೋಗ್ಯವಾದ ಕೋರ್ಟ ಫೀ ಮತ್ತು ಮೌಲೀಕರಣ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಈ ದಾವೆ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ದಿನಾಂಕ **22-02-2021** ರಂದು ನಾನು ಯಾವುಕಿದೇ ಗಿಫ್ಟ ಡೀಡ ಮಾಡಿಲ್ಲ, ನನ್ನ ಮಗ ಮೋಸದಿಂದ ಮಾಡಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**14.** ನಾನು ಹುಬ್ಬಳ್ಳಿ ನ್ಯಾಯಾಲಯದಲ್ಲಿ ನನ್ನ ಮಗನ ಮೇಲೆ ಓಎಸ್ **144/2021** ರಂತೆ ದಾವೆ ಮಾಡಿದ್ದೆನೆ ಎಂದರೆ ನಿಜ. ಸದರಿ ದಾವೆ ಹುಬ್ಬಳ್ಳಿಯಲ್ಲಿರುವ ಆರ್ ಎಸ್ ನಂ. **102**/ಬಿ ಪ್ಲಾಟ ನಂ. **170** ಗೆ ಸಂಬಂಧ ಪಟ್ಟಂತೆ ಮಾಡಿದ್ದೆ ಎಂದರೆ ನಿಜ. ಆ ಮನೆ ಸಂಪೂರ್ಣವಾಗಿ ನನ್ನ ಮಗ ಕಟ್ಟಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ನಾನೂ ಸಹ ಹಣ ಕೊಟ್ಟಿದ್ದು ನನ್ನ

ಮೊದಲನೆ ಹೆಂಡತಿ ತನ್ನ ನಿವೃತ್ತಿ ವೇತನದಿಂದ ರೂ. 8,00,000/- ಕೊಟ್ಟಿದ್ದಾಗಿ ಹೇಳುತ್ತಾರೆ. ಆ ಆಸ್ತಿಯಲ್ಲಿ ನನಗೂ ಪಾಲು ಬೇಕು ಎಂದು ಕೇಸ ಮಾಡಿದ್ದೇನೆ ಎಂದರೆ ನಿಜ . ಸದರಿ ದಾವೆಯನ್ನು ಕೂಲಂಕುಷವಾಗಿ ವಿಚಾರಣೆ ಮಾಡಿದ ಬಳಿಕ ಮಾನ್ಯ ನ್ಯಾಯಾಲಯದವರು ನನ್ನ ದಾವೆ ವಜಾ ಮಾಡಿದ್ದಾರೆ ಎಂದರೆ ಸಾಕ್ಷಿ ನಾನು ಸಾಯುವವರೆಗೂ ಆ ಮನೆಯಲ್ಲಿ ಇರಬೇಕೆಂದು ಆದೇಶ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಮಗ ಆ ದಾವೆಯಲ್ಲಿ ಕೋರ್ಟ ಮುಂದೆ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಹಾಗೂ ಮನೆಯಲ್ಲಿ ಇರಲು ಯಾವುದೇ ರೀತಿಯಿಂದ ತೊಂದರೆ ಮಾಡುವುದಿಲ್ಲ ಎಂದು ತನ್ನ ಸ್ವಖುಷಿಯಿಂದ ಮುಚ್ಚಳಿಗೆ ಬರದುಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನಾನು ಪಾಲು ಕೇಳಿದ್ದನ್ನು ರದ್ದು ಮಾಡಿದ್ದಾರೆ ಎಂದು ಆ ದಾವೆಯ ಜಡ್ಜಮೆಂಟ ಹಾಗೂ ಡಿಕ್ರಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನನಗೆ ಈಗ ಕಣ್ಣು ಸರಿಯಾಗಿ ಕಾಣುತ್ತಿಲ್ಲ , ಆ ದಾಖಲೆ ಓದಲು ಬರುವುದಿಲ್ಲ ಎಂದು ಹೇಳುತ್ತಾರೆ.

15. ಶಬಾನಾ ನನ್ನ ಮಗಳು , ಫಿರೋಜ ಆಕೆಯ ಗಂಡ. ಅವರುಗಳು ನನ್ನ ಮೇಲೆ ಒಂದು ದಾವೆ ಮಾಡಿದ್ದರು ಎಂದರೆ ನಿಜ. ಅದು ಗದಗ ಪ್ರಿನ್ಸಿಪಾಲ ಸಿವಿಲ್ ಜಡ್ಜ ನ್ಯಾಯಾಲಯದ ಓಎಸ್ ನಂ. 360/2011 ರಂತೆ ದಾಖಲ ಆಗಿತ್ತು ಎಂದರೆ ನನಗೆ ಕೇಸ ನಂಬರ ನೆನಪಿಲ್ಲ , ಆದರೆ ಕೇಸ ದಾಖಲ ಆಗಿತ್ತು ಎಂದು ಹೇಳುತ್ತಾರೆ. ಆರ್ ಎಸ್ ನಂ. 429/1+2 ಪ್ಲಾಟ ನಂ. 21 ರಂತೆ ಇರಾನಿ ಕಾಲೋನಿ, ಗದಗಕ್ಕೆ ಸಂಬಂಧ ಪಟ್ಟಂತೆ ಆ ದಾವೆ ಇತ್ತು ಎಂದರೆ ನಿಜ. ಗದಗ ಕೋರ್ಟನಲ್ಲಿ ನಾನು ನನ್ನ ಮಗಳ ಮೇಲೆ ಕೇಸ ಮಾಡಿದ್ದೆ . ನಾನು ಆಸ್ಟ್ರೇಲಿಯಾಗೆ ಹೋಗುವಾಗ ನನ್ನ ಮಗಳು ಮುತ್ತು ಅಳಿಯ ನನಗೆ ಮೋಸ ಮಾಡಿ ನನ್ನ ಇರಾನಿ ಕಾಲೋನಿಯಲ್ಲಿರುವ ಮನೆಯಲ್ಲಿ ಡಾಕ್ಯೂಮೆಂಟ ಕಳ್ಳತನ ಮಾಡಿದ್ದರು . ಆ ಮನೆಯ ಕೆಳಗಡೆ ಅವರು ಇರುತ್ತಿದ್ದರು , ಮೇಲೆ ನಾವು ಇರುತ್ತಿದ್ದೆವು. ಸದರಿ ಆಸ್ತಿಯನ್ನು ನನ್ನ ಮಗಳು ಲೋನ ಮಾಡಿ ತೆಗೆದುಕೊಂಡಿದ್ದಳು. ಅದನ್ನು ನಾನೇ ಖರ್ಚು ಮಾಡಿ ಮನೆ ಕಟ್ಟಿದ್ದೆ . 2011 ರ ಮುಂಚಿತವಾಗಿ ನನ್ನ ಮಗ ಆಸ್ಟ್ರೇಲಿಯಾದಲ್ಲಿ ಇದ್ದಾಗ ನನಗೆ ಇರಲು ಅವಕಾಶ ಮಾಡಿಕೊಟ್ಟಿದ್ದಳು ಎಂದರೆ ಸಾಕ್ಷಿ ಆ ಮನೆ ಕಟ್ಟಲು ಪೂರ್ಣ ನಾನೇ ಇನ್ವೆಸ್ಟ ಮಾಡಿದ್ದೆ ಎಂದು ಹೇಳುತ್ತಾರೆ. ಆದ್ದರಿಂದ ನಾನು ಅಲ್ಲಿ ಇದ್ದೆ ಎಂದು ಹೇಳುತ್ತಾರೆ. ಸದರಿ ಆಸ್ತಿ ನನ್ನ ಮಗಳ ಸ್ವತಂತ್ರ ಆಸ್ತಿ ಇದ್ದು ನಾನು ಅದಕ್ಕೆ ಸಂಬಂಧ ಪಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯ ಮತ್ತು ಮಗಳ ಜೊತೆಗೆ ನಾನು ತಂಟೆ ತಕರಾರು ಮಾಡಿದ್ದರಿಂದ ಅವರು ಸಿವಿಲ್ ಕೋರ್ಟ ನನ್ನ ವಿರುದ್ದ ಹೋಗಿದ್ದರು ಎಂದರೆ ಸರಿಯಲ್ಲ. ಅವರು ದಾವೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ನಾನು ಸಂಬಂಧ ಇಲ್ಲ , ಅಲ್ಲಿ ಹರಕತ್ ಮಾಡಬಾರದು ಎಂದು ನನ್ನ ಮಗಳು ಅಳಿಯ ಕೇಸ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಲೋಕ ಅದಾಲಸ್ ನಲ್ಲಿ ಮಧ್ಯಸ್ಥಿಕೆದಾರರ ಮುಂದೆ ಹಾಜರ ಆಗಿ ನಾನು ಜೀವಂತ ಇರುವವರೆಗೂ ಅಲ್ಲಿ ಮೊದಲನೆ ಮಹಡಿಯಲ್ಲಿ ಅಲ್ಲಿ ಇರಲು ಅವಕಾಶ ಮಾಡಿ ಕೊಡಿ ಎಂದು ವಿನಂತಿಸಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಅವರೇ ನನಗೆ ಮೊದಲನೆ ಮಹಡಿಯಲ್ಲಿ ಇರಲು ವಿನಂತಿಸಿದ್ದರು ಎಂದು ಹೇಳುತ್ತಾರೆ . ಆ ಪ್ರಕಾರ ಅಪಸಾತ ಡಿಕ್ರಿ ಆಗಿ ರಾಜಿ ಮಾಡಿಕೊಂಡಿದ್ದೇನೆ ಎಂರದೆ ಸಾಕ್ಷಿ ನಾನೇ ಸ್ವತಃ ರಾಜಿ ಮಾಡಿಕೊಂಡಿದ್ದು ನನ್ನ ಮಗಳು

ಸರಕಾರಿ ಟೀಚರ ಇದ್ದು ಅವಳ ನೌಕರಿಗೆ ತೊಂದರೆ ಆಗಬಾರದು ಎಂದು ರಾಜಿ ಮಾಡಿಕೊಂಡಿದ್ದೆ ಎಂದು ಹೇಳುತ್ತಾರೆ. ಪದೇ ಪದೇ ಮಕ್ಕಳ ಮೇಲೆ ದಾವೆ ಮಾಡುವುದು ಹಾಗೂ ಅವರಿಗೆ ತೊಂದರೆ ಕೊಡುವುದು ಹವ್ಯಾಸ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**16.** ಗದಗ ಬಿಟ್ಟು ಹುಬ್ಬಳಿಗ್ಗೆ ಯಾವಾಗ ಬಂದಿದ್ದೇನೆ ಎಂದರೆ ಸಾಕ್ಷಿ ನನ್ನ ಮಗನೇ ಕರೆದುಕೊಂಡು ಬಂದಿದ್ದ , ನನಗೆ ಇಸವಿ ನೆನಪಿಲ್ಲ ಎಂದು ಹೇಳುತ್ತಾರೆ. **2011** ರಲ್ಲಿ ನನ್ನ ಮಗ ಹುಬ್ಬಳ್ಳಿಗೆ ಕರೆದುಕೊಂಡು ಬಂದಿದ್ದ ಎಂದರೆ ನಿಜ. **2011** ರಿಂದ ಇಲ್ಲಿಯವರೆಗೆ ನಾನು ಹುಬ್ಬಳ್ಳಿಯ ಮನೆಯಲ್ಲಿದ್ದೇನೆ ಎಂದರೆ ನಿಜ.

**17.** ಮೊದಲಿನಿಂದಲೂ ನನ್ನ ಮಗ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದಾನೆ ಎಂದರೆ ನನ್ನ ಮಗ **3**ನೇ ಮದುವೆಯಾದ ನಂತರ ನನ್ನನ್ನು ಬಿಟ್ಟು ಬಿಟ್ಟಿದ್ದಾನೆ ಎಂದು ಹೇಳುತ್ತಾರೆ. ಮೊದಲಿನಿಂದಲೂ ನನ್ನ ಮಗ ನನ್ನ ಆರೈಕೆ , ಸೇವಾ , ಶೂಶ್ರೂಷೆ ಮಾಡಿದ್ದಾನೆ ಎಂದರೆ ಸರಿಯಲ್ಲ.ಆ ಕಾರಣದಿಂದ ನಾನು ಹುಕ್ಕೇರಿಯ ಈ ಆಸ್ತಿಗಳನ್ನು ಸ್ವಇಚ್ಛೆಯಿಂದ ದಾನ ಮಾಡಿದ್ದೆನೆ ಎಂದರೆ ಸಾಕ್ಷಿ ಆತ ಮೋಸ ಮಾಡಿ ತೆಗೆದುಕೊಂಡಿದ್ದಾನೆ ಎಂದು ಹೇಳುತ್ತಾರೆ. ನಾನು ನನ್ನ ಹೆಂಡತಿ ಮತ್ತು ಅವಳ ಸಂಬಂಧಿಕರ ಮಾತು ಕೇಳಿ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೇ ತೊಂರೆ ಲಕೊಡಬೇಕೆಂದು ನಾನು ಸುಳ್ಳು ಪ್ರಕರಣ ದಾಖಲ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ವಇಚ್ಛೆಯಿಂದ ಈ ದಾವೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**